

ಮೀನಿನ ಅಪ್ಪಣೆ,
ನನ್ನ ಅಪೇಕ್ಷೆ



ಮೀನಿನ ಅಪ್ಪಣೆ, ನನ್ನ ಅಪೇಕ್ಷೆ

ರಷ್ಯನ್ ಜಾನಪದ ಕಥೆ

ಎಂ. ಬುಲಾತೊವ್
ಹೇಳಿದಂತೆ

ಒಂದಾನೊಂದು ಹಳ್ಳಿ. ಅಲ್ಲಿ ಮೂರು ಮಂದಿ ಅಣ್ಣತಮ್ಮಂದಿರು. ಇಬ್ಬರು ಬುದ್ಧಿವಂತರು, ಮೂರನೆಯವನು ದಡ್ಡ. ಅವನನ್ನು ದಡ್ಡ ಯೆಮೆಲ್ಯ ಅಂತಾನೇ ಕರೀತಿದ್ದರು. ಒಂದು ಸಾರಿ ಅಣ್ಣಂದಿರಿಬ್ಬರೂ ದೂರದ ಊರಿನಲ್ಲಾಗೋ ಸಂತೆಗೆ ಹೊರಟರು. ಹೋಗೋಕೆ ಮುಂಚೆ ತಮ್ಮನಿಗೆ ಹೇಳ್ತಾರೆ:

"ಏಯ್, ತಮ್ಮ, ನಾವು ಸಂತೇಗೆ ಹೋಗಿ ಬರ್ತೀವಿ. ನೀನು ಸುಮ್ಮನೆ ಒಲೆ ಪಕ್ಕದ ಅಟ್ಟದ ಮೇಲೆ ಸೋಮಾರಿಯಾಗಿ ಬಿದ್ದಿರಬೇಡ. ಅತ್ತಿಗೆಯರಿಗೆ ಸಹಾಯ ಮಾಡು. ಅವರು ಹೇಳಿದ ಕೆಲಸಾನೆಲ್ಲ ಮಾಡಿಕೊಡು. ನಾವು ನಿನಗೆ ಇನಾಮು ತಂದುಕೊಡ್ತೀವಿ – ಹೊಸಾ ಹೊಸ ಬೂಡ್ಸು, ಕೋಟು, ಸೊಗಸಾದ ಕೆಂಪು ಟೋಪಿ, ಎಲ್ಲಾ ತಂದುಕೊಡ್ತೀವಿ."

"ಆಗಲಿ. ಹಾಗೇ ಮಾಡ್ತೀನಿ!"

ಅಣ್ಣಂದಿರು ಎಲ್ಲರಿಗೂ ಹೋಗಿಬರ್ತೀವಿ ಅಂತ ಹೇಳಿ ಹೊರಟರು.

ಸ್ವಲ್ಪ ಹೊತ್ತಾದ ಮೇಲೆ ಅತ್ತಿಗೆಯರು ಹೇಳ್ತಾರೆ:

"ಮನೆಯಲ್ಲಿ ನೀರಿಲ್ಲ ಕಣೋ, ಯೆಮೆಲ್ಯ. ನದೀಗೆ ಹೋಗಿ ನೀರು ತಗೊಂಡು ಬಾ."

ಯೆಮೆಲ್ಯ ಮಲಗಿದ್ದಲ್ಲಿಂದಲೇ ಹೇಳ್ತಾನೆ:

"ನಂಗಾಗೊಲ್ಲ!"

"ಹಾಗಂದ್ರೆ ಹೇಗೋ? ನಮಗೆ ಸಹಾಯ ಮಾಡ್ತೀನಿ ಅಂತ ನೀನೇ ನಿನ್ನ ಅಣ್ಣಂದಿರಿಗೆ ಹೇಳಲಿಲ್ಲವೇ?"

"ಸರಿ, ಹಾಗಾದ್ರೆ!"

ಯೆಮೆಲ್ಯ ಒಲೆ ಪಕ್ಕದ ಅಟ್ಟದ ಮೇಲಿನಿಂದ ಕೆಳಗಿಳಿದ, ತನ್ನ ಹಳೆಯ ಕೋಟು ಬೂಟು ತೊಟ್ಟ, ಬೆಲ್ಟಿಗೆ ಒಂದು ಕೊಡಲಿ ತಗುಲಿಸಿಕೊಂಡು, ಅಡ್ಡೆಯನ್ನು ಹೆಗಲ ಮೇಲೆ ಇಟ್ಟುಕೊಂಡು ಆ ಕಡೆ ಈ ಕಡೆ ಬಕೆಟ್ ಸಿಕ್ಕಿಸಿಕೊಂಡು, ಗುಡ್ಡದ ಮೇಲಿನಿಂದ ನದಿಯ ಕಡೆಗೆ ಹೊರಟ.

ಚಳಿಗಾಲ. ನದಿಯ ನೀರು ಗಡ್ಡೆ ಕಟ್ಟಿತ್ತು. ಅವನು ಅದರಲ್ಲಿ ನೀರು ತರಲೆಂದೇ ಒಂದು ತೂತನ್ನು ಕೊರೆದಿದ್ದ. ಅದೂ ಈಗ ಮುಚ್ಚಿ ಹೋಗಿತ್ತು. ಕೊಡಲಿಯಿಂದ ಮತ್ತೆ ಮೇಲೆ ಕಟ್ಟಿದ್ದ ಮಂಜನ್ನೆಲ್ಲ ಕೊಚ್ಚಿ

ಹಾಕಿದ. ಅದನ್ನೆಲ್ಲ ಪಕ್ಕಕ್ಕೆ ಸರಿಸುತ್ತಿದ್ದಾಗ, ಕೆಳಗೆ ನೀರಿನಲ್ಲಿ ಒಂದು ದೊಡ್ಡ ಮೀನು ಇದ್ದುದು ಅವನ ಕಣ್ಣಿಗೆ ಬಿತ್ತು. ಅವನು ಬೇಗ ಕೈಹಾಕಿ ಅದರ ಬಾಲ ಹಿಡಿದುಕೊಂಡು ಮೇಲೆಳೆದ.

ಆ ಮೀನು ಮನುಷ್ಯರಂತೆಯೇ ಮಾತನಾಡುತ್ತ ಅವನಿಗೆ ಹೇಳುತ್ತೆ:

"ನನ್ನನ್ನು ಯಾಕೆ ಹಿಡಿದೆಯಪ್ಪ, ಪೆದ್ದ ಯೆಮೆಲ್ಯ?"

"ಯಾಕೆ, ಹಾಗಂದ್ರೇನು? ನಿನ್ನನ್ನು ನನ್ನ ಅತ್ತಿಗೆಯವರಿಗೆ ಕೊಡ್ತೀನಿ. ಅವರು ರುಚಿಯಾದ ಮೀನು ಸಾರು ಮಾಡಿ ನನಗೆ ಬಡಿಸ್ತಾರೆ."

ಅದನ್ನು ಕೇಳಿ ಮೀನು ಅವನನ್ನು ದೈನ್ಯದಿಂದ ಕೇಳಿಕೊಂಡಿತು:

"ಬೇಡ, ಯೆಮೆಲ್ಯ. ನನ್ನನ್ನು ನದಿಯಲ್ಲೇ ಬಿಟ್ಟುಬಿಡು. ನಿನ್ನನ್ನು ದೊಡ್ಡ ಸಾವಕಾರನನ್ನಾಗಿ ಮಾಡ್ತೀನಿ!"

"ನಂಗೇನೂ ಬೇಡ" ಅಂತಾನೆ ಯೆಮೆಲ್ಯ. "ನಿನ್ನ ಸಾವಕಾರಿಕೆ ಇಲ್ದೇನೇ ನಾನು ಇರಬಲ್ಲೆ."


"ಹಾಗಾದರೆ ಒಂದು ಮಾಡ್ತೀನಿ: ನೀನು ಏನು ಹೇಳ್ತೀಯೋ ಅದೆಲ್ಲ ಆಗೋ ಹಾಗೆ ಮಾಡ್ತೀನಿ. ನೀನು ಮಾತ್ರ ಯಾವಾಗಲೂ 'ಮೀನಿನ ಅಪ್ಪಣೆ, ನನ್ನ ಅಪೇಕ್ಷೆ' ಅಂತ ಹೇಳ್ಬೇಕು."

"ಸರಿ, ಹಾಗಾದರೆ!" ಯೆಮೆಲ್ಯ ಹೇಳ್ತಾನೆ.

ಮೀನನ್ನು ನದಿಯೊಳಕ್ಕೇ ಬಿಟ್ಟು, ಗಟ್ಟಿಯಾಗಿ ಹೇಳಿದ:

"ಮೀನಿನ ಅಪ್ಪಣೆ, ನನ್ನ ಅಪೇಕ್ಷೆ – ಬಕೆಟ್ಟುಗಳೇ, ನೀವೇ ನೀರು ತುಂಬಿಕೊಳ್ಳಿ, ಮನೆಗೆ ತಗೊಂಡು ಹೋಗಿ!"





ಅವನು ಇನ್ನೂ ಹೇಳೇ ಇರಲಿಲ್ಲ, ಆಗಲೇ ಬಕೆಟ್ಟು ಗಳು ನೀರಿನಿಂದ ತುಂಬಿದವು, ಗುಡ್ಡ ಏರಿ ಮನೆಯ ಕಡೆಗೆ ಹೊರಟವು. ಅವು ಬಾತುಗಳಂತೆ ಕಿಸುಗಾಲು ಹಾಕಿಕೊಂಡು ಮುಂದೆ ಹೋಗ್ತಿವೆ. ಯೆಮೆಲ್ಯ ಅವುಗಳ ಹಿಂದೆ ತನ್ನೊಳಗೇ ಮುಸಿಮುಸಿ ನಗುತ್ತ ಹೆಜ್ಜೆ ಹಾಕಿಕೊಂಡು ಹೋಗ್ತಿದಾನೆ.

ಹಳ್ಳಿಯವರೆಲ್ಲ ಇದನ್ನು ನೋಡಿದರು – ಆಶ್ಚರ್ಯಪಟ್ಟರು, ಅಂಗಳಗಳಿಂದ, ಮನೆಗಳಿಂದ, ಓಡೋಡಿ ಬಂದರು.


"ನೋಡಿ, ನೋಡಿ" ಅವರು ಹೇಳ್ತಾರೆ. "ನೋಡಿದಿರಾ, ಯೆಮೆಲ್ಯ ಎಂಥ ಚಮತ್ಕಾರ ಕಲ್ತಿದಾನೆ ! ಬಕೆಟ್ಟುಗಳು ಅವೇ ಮನೆಗೆ ಹೋಗ್ತಿವೆ, ಒಂದು ಸಾರಿಯೂ ಎಡವ್ತಿಲ್ಲ, ಒಂದು ಹನಿ ನೀರನ್ನೂ ಬೀಳಿಸ್ತಿಲ್ಲ !"

ಯೆಮೆಲ್ಯನ ಅತ್ತಿಗೆಯರೂ ಇದನ್ನು ನೋಡಿದರು, ಪಿಸುಗುಟ್ಟಿಕೊಂಡರು:

"ಇವನನ್ನು ದಡ್ಡ ಅಂತ ಯಾರು ಹೇಳಿದ್ದು ? ಎಂಥ ಚುರುಕು ಬುದ್ಧಿ ಇವನದ್ದು – ಬಕೆಟ್ಟುಗಳನ್ನು ಅವೇ ಮನೆಗೆ ಬರುವಂತೆ ಮಾಡಿದಾನಲ್ಲ !"

ಮನೆಗೆ ಬಂದಾಗ ಬಕೆಟ್ಟುಗಳು ತಾವೇ ಮೆಟ್ಟಲು ಹತ್ತಿದವು, ಬೆಂಚಿನ ಮೇಲೆ ತಮ್ಮ ಸ್ಥಳದಲ್ಲಿ ಹೋಗಿ ಕುಳಿತವು. ಆದರೂ ಒಂದು ಹನಿ ನೀರನ್ನೂ ತುಳುಕಿಸಲಿಲ್ಲ.

ಯೆಮೆಲ್ಯ ಕೋಟು ಬಿಚ್ಚಿ, ಬೂಟುತೆಗೆದು, ಮತ್ತೆ ಒಲೆ ಪಕ್ಕದ ಅಟ್ಟ ಹತ್ತಿ ಕುಳಿತ. ಆದರೆ ಒಲೆ ತಣ್ಣಗಾಗಿದೆ ! ಹೇಳ್ತಾನೆ:



“ಹೇಯ್, ಅತ್ತಿಗೆಯರೇ ! ಏನಿದು ಒಲೆ ತಣ್ಣಗಾಗಿದೆಯಲ್ಲ !”

“ತಣ್ಣಗಾಗದೆ ಏನು ಮಾಡುತ್ತೆ. ಒಲೇಲಿ ಬೆಂಕಿ ಇದ್ದರೆ ತಾನೆ. ಕಾಡಿಗೆ ಹೋಗಿ ಕಟ್ಟಿಗೆ ತಗೊಂಡು ಬಾ. ಒಲೆ ಹೊತ್ತಿಸಿ ಬೆಚ್ಚಗೆ ಮಾಡ್ತೀವಿ.”

“ಉಹೂಂ. ಅದೆಲ್ಲ ಆಗೊಲ್ಲ.”

“ಓಹ್, ಮತ್ತೆ ಆಗೊಲ್ಲ ಅಂತ ಶುರು ಮಾಡಿದೆಯ? ಹಾಗಾದರೆ ಊರಿಂದ ನಿನಗೇ ಇನಾಮು ಇಲ್ಲ. ಅಲ್ಲದೆ ನಿನ್ನ ಅಟ್ಟ ತಣ್ಣಗೇ ಇರುತ್ತೆ.”

ಏನು ಮಾಡೋದು. ಯೆಮೆಲ್ಯ ಅಟ್ಟದ ಮೇಲಿನಿಂದ ಇಳಿದ. ಕೋಟು ಬೂಟು ತೊಟ್ಟ. ಕಾಡಿಗೆ ಹೋಗಲು ಎಲ್ಲ ಸಿದ್ಧ ಮಾಡಿಕೊಳ್ಳುವುದಕ್ಕೆ ಅಂಗಳಕ್ಕೆ ಹೋದ. ಜಾರುಬಂಡಿಯನ್ನು ಹೊರಗೆ ಎಳೆದ, ಅದರ ಮೇಲೆ ಒಂದು ಕೊಡಲಿಯನ್ನೂ, ಒಂದು





ಗರಗಸವನ್ನೂ ಒಂದು ದೊಡ್ಡ ಹಗ್ಗವನ್ನೂ ಇಟ್ಟ. ಆಮೇಲೆ ತಾನೇ ಅದರ ಮೇಲೆ ಕುಳಿತ.

"ಹೇಯ್, ಅತ್ತಿಗೆಯರೇ ! ಗೇಟು ತೆಗೀರಿ. ನಾನು ಕಾಡಿಗೆ ಹೋಗ್ತಿದೀನಿ" ಅಂತ ಕೂಗಿ ಹೇಳ್ತಾನೆ.

"ಇದೇನೋ ಇದು?" ಅತ್ತಿಗೆಯರು ಹೇಳ್ತಾರೆ. "ನಿನಗೆ ಬುದ್ಧಿ ನೆಟ್ಟಗೆ ಇದೆಯೋ ಇಲ್ಲವೋ? ಕುದುರೇನೇ ಕಟ್ಟಿಲ್ಲ ಕಾಡಿಗೆ ಹೊರಟು ಬಿಟ್ಟ ಇವನು. ಹುಂ, ಹೋಗಲಿ. ನಾವೇ ಕುದುರೆ ಕಟ್ತೀವಿ, ಬಿಡು !"



ಯೆಮೆಲ್ಯ ಅವರಿಗೆ ಉತ್ತರ ಹೇಳ್ತಾನೆ:


"ಕುದುರೇನ ಯಾಕೆ ಬಳಲಿಸ್ಬೇಕು? ಪಾಪ, ಅದನ್ನು ಕಂಡರೆ ನನಗೆ ಕರುಣೆ ಬರುತ್ತೆ. ನಾನು ಕುದುರೆ ಇಲ್ದೇನೇ ಹೋಗ್ತೀನಿ! ಗೇಟು ತೆಗೀರಿ!"

ಅತ್ತಿಗೆಯರಿಗೆ ಆಶ್ಚರ್ಯವಾಯಿತು. ಆದರೂ ಗೇಟು ತೆಗೆದರು. ಯೆಮೆಲ್ಯ ಮೆಲ್ಲಗೆ ಹೇಳಿದ:

"ಮೀನಿನ ಅಪ್ಪಣೆ, ನನ್ನ ಅಪೇಕ್ಷೆ. ಜಾರುಬಂಡಿಯೇ, ಹುಂ, ಹೊರಡು ಕಾಡಿಗೆ ಓಡು!"

ಜಾರುಬಂಡಿ ಓಡಿತು, ಚಾಟಿ ಏಟು ತಿಂತೇನೋ ಅನ್ನುವಂತೆ. ಅದರ ಕೆಳಗೆ ಮಂಜು ಕರಂ ಕರಂ ಅಂತ ಗಟ್ಟಿಯಾಗಿ ಶಬ್ದ ಮಾಡುತ್ತಿತ್ತು!






ಜಾರುಬಂಡಿ ಹಳ್ಳಿ ಪಾಳೆಯಗಳ ಮೂಲಕ ದೌಡಾಯಿಸಿಕೊಂಡು ಹೋಗುತ್ತೆ. ಅದರ ಮೂಕಿಗಳು ಗಾಳಿಯಲ್ಲಿ, ಜೋರಾಗಿ ಎಗರಾಡುತ್ತಿವೆ – ಯೆಮೆಲ್ಯ ಅವುಗಳನ್ನು ಕಟ್ಟುವುದನ್ನು ಮರೆತಿದ್ದ.

ಹಳ್ಳಿಯಲ್ಲಿ ಅವತ್ತು ಹಬ್ಬ. ಬೀದಿಗಳಲ್ಲಿ ಜನ ತುಂಬಿದ್ದರು. ಅವರು ಜಾರುಬಂಡಿಯ ಸುತ್ತ ಮುತ್ತುತ್ತಾರೆ – ಅದರ ಹಿಂದೆ ಅದರ ಪಕ್ಕದಲ್ಲಿ, ಅದರ ಮುಂದೆ. ಜಾರು ಪಟ್ಟಿಗಳ ಕೆಳಗೆ ಇಣಕಿ ನೋಡುತ್ತಾರೆ – ಕುದುರೆಗಳಿಲ್ಲದೆ ಅದು ಹೇಗೆ ಹೋಗುತ್ತಿದೆ ಅನ್ನುವುದನ್ನು ತಿಳಿಯೋದಕ್ಕೆ. ಕಟ್ಟಿರದ ಮೂಕಿಗಳು ಸ್ವತಂತ್ರವಾಗಿ ತೂಗಾಡುತ್ತ ಜನರನ್ನು ಪಕ್ಕಕ್ಕೆ ತಳ್ಳುತ್ತವೆ. ಅನೇಕರನ್ನು ಮಂಜಿನಲ್ಲಿ ಮುಳುಗಿಸುತ್ತವೆ. ಅವರಿಗೆ ತುಂಬ ಕೋಪ ಬಂತು. ಯೆಮೆಲ್ಯನನ್ನು ಹಿಡಿದು ತಕ್ಕ ಶಾಸ್ತಿ ಮಾಡಬೇಕೂಂತ ನೋಡಿದರು. ಆದರೆ ಅವರಿಗೆ ಅಷ್ಟು ಬೇಗ ಓಡುವುದಕ್ಕೆ ಆಗಲಿಲ್ಲ. ಅವನು ಅವರ ಕೈಯಿಂದ ತಪ್ಪಿಸಿಕೊಂಡ.

ಜಾರುಬಂಡಿ ಕಾಡಿನೊಳಕ್ಕೆ ಹೋದ ಮೇಲೆ ನಿಂತಿತು. ಯೆಮೆಲ್ಯ ಬಂಡಿಯಿಂದಿಳಿದು, ಸುತ್ತ ನೋಡಿ, ಹೇಳಿದ:

"ಮೀನಿನ ಅಪ್ಪಣೆ, ನನ್ನ ಅಪೇಕ್ಷೆ: ಗರಗಸವೇ, ಸ್ವಲ್ಪ ಮರಗಳನ್ನು ಕೊಯ್ದು ತಗೊಂಡು ಬಾ. ಮರಗಳು ಒಳ್ಳೇದಾಗಿರಬೇಕು, ಚೆನ್ನಾಗಿ ಒಣಗಿರಬೇಕು. ಕೊಡಲಿಯೇ, ಆ ಮರಗಳನ್ನು ಕಟ್ಟಿಗೆಯಾಗಿ ಕಡಿ. ಕಟ್ಟಿಗೆಯೇ, ಕೊಡಲಿ ನಿನ್ನನ್ನು ತುಂಡುಮಾಡುವುದಕ್ಕೆ ಬಿಡು. ಕಡಿದ ಮೇಲೆ ನೀನು ಜಾರುಬಂಡಿ ಮೇಲೆ ರಾಶಿ ಹಾಕಿಕೊಂಡು ಹಗ್ಗದಿಂದ ಕಟ್ಟಿಕೊ."

ಅವನು ಹೇಳಿದಂತೆ ಎಲ್ಲ ನಡೆಯಿತು. ಗರಗಸವು ಸ್ವಲ್ಪ ಮರಗಳನ್ನು ಕೊಯ್ದಿತು, ಕೊಡಲಿ ಅವುಗಳನ್ನು ಕಟ್ಟಿಗೆಯಾಗಿ ಕಡಿಯಿತು, ಕಟ್ಟಿಗೆ ಜಾರುಬಂಡಿ ಬಳಿಗೆ ನೇರವಾಗಿ ಓಡಿ ಹೋಗಿ ಅದರ ಮೇಲೆ ರಾಶಿ ಹಾಕಿಕೊಂಡಿತು, ಹಗ್ಗದಿಂದ ತನ್ನನ್ನು ಕಟ್ಟಿಕೊಂಡಿತು. ಎಲ್ಲ ಸಿದ್ಧವಾಯಿತು. ಈಗ ಹಳ್ಳಿಗೆ ಹಿಂದಕ್ಕೆ ಹೋಗಬಹುದು !



ಯೆಮೆಲ್ಯ ಈ ಸಾರಿ ಮೂಕಿಗಳನ್ನು ಸರಿಯಾಗಿ ಕಟ್ಟಿದ – ದಾರಿಯಲ್ಲಿ ಜನರಿಗೆ ತೊಂದರೆ ಆಗಬಾರದೂಂತ. , ಕಟ್ಟಿಗೆ ಹೊರೆಯ ಮೇಲೆ ಕೂತುಕೊಂಡು ಹೇಳಿದ:

"ಮೀನಿನ ಅಪ್ಪಣೆ, ನನ್ನ ಅಪೇಕ್ಷೆ: ಜಾರು ಬಂಡಿಯೇ, ಮನೆಗೆ ಹೊರಡು. ಹುಂ, ಓಡು !"


ಜಾರುಬಂಡಿ ಭರ್ರನೆ ಹೊರಟಿತು, ಹಿಂದೆ ಧೂಳಿನಂತೆ ಮಂಜನ್ನು ಎಬ್ಬಿಸುತ್ತ.

ಹಳ್ಳಿಯಲ್ಲಿ ಜನ ಯೆಮೆಲ್ಯಗಾಗಿಯೇ ಕಾದಿದಾರೆ – ಕೆಲವರು ಕವಲುಗೋಲು, ಪಿಕಾಸಿ ಹಿಡಿದಿದಾರೆ, ಕೆಲವರು ಕೋಲು, ದೊಣ್ಣೆ ಹಿಡಿದಿದಾರೆ, ಕೆಲವರು ಹಗ್ಗ ಹಿಡಿದಿದಾರೆ– ಯೆಮೆಲ್ಯನನ್ನು ಹಿಡಿದು ದಂಡಿಸಬೇಕೂಂತ. ಕಾಡಿಗೆ ಹೋಗುವಾಗ ಅವನು ಯಾಕೆ ಅವರನ್ನೆಲ್ಲ ಅಷ್ಟು ಹೆದರಿಸಿದ್ದ, ತಳ್ಳಿ ಮಂಜಿನಲ್ಲಿ ಬೀಳಿಸಿದ್ದ !

ಅವನನ್ನು ಕಂಡ ಕೂಡಲೇ ಅವರು ಹಗ್ಗ, ಕೋಲುಗಳಿಂದ ಅವನನ್ನು ತಡೆಯೋಕೆ ಹೋಗ್ತಾರೆ, ಕಿರುಚುತಾರೆ:

"ಹಿಡಿಯಿರಿ ಅವನನ್ನು ! ನಿಲ್ಲಿಸಿರಿ ಅವ ನನ್ನು ! ಕಟ್ಟಿಹಾಕಿ ಅವನನ್ನು !"

ಆದರೆ, ಎಲ್ಲಿ ಅವನನ್ನು ಹಿಡಿಯೋದು, ಕಟ್ಟಿ ಹಾಕೋದು. ಆ ಜಾರುಬಂಡಿಯನ್ನು ನಿಲ್ಲಿಸೋಕೆ ಸಾಧ್ಯವೇ? ಅದು ಓಡುತ್ತೆ, ತನ್ನ ಹಿಂದೆ ಎಬ್ಬಿಸಿದ ಮಂಜಿನ ರಾಶಿಯಲ್ಲಿ ಕಣ್ಮರೆಯಾಗುತ್ತೆ.



ಮನೆ ತಲುಪಿದಾಗ ಜಾರುಬಂಡಿ ನಿಂತಿತು. ಹಗ್ಗ ಬಿಚ್ಚಿಕೊಂಡಿತು. ಕಟ್ಟಿಗೆ ತನ್ನಷ್ಟಕ್ಕೆ ತಾನೇ ಬಂಡಿ ಯಿಂದ ಇಳಿಯಿತು. ಕೆಲವು ಕಟ್ಟಿಗೆಗಳು ಅಂಗಳದಲ್ಲಿ ನೀಟಾಗಿ ಪೇರಿಸಿಕೊಂಡವು, ಇನ್ನು ಕೆಲವು ಮೆಟ್ಟಲು ಹತ್ತಿ ಮನೆಯ ಒಳಗೆ ಹೋಗಿ ನೇರವಾಗಿ ಒಲೆಯ ಒಳಕ್ಕೇ ನೆಗೆದವು. ಒಂದೊಂದಕ್ಕೂ ಅದರದರ ಜಾಗ



ಗೊತ್ತು. ಕೊಡಲಿಯೂ ಗರಗಸವೂ ಮನೆಯ ಒಳಗೆ ಹೋದವು, ಬೆಂಚ್ ಕೆಳಗೆ ಮೊದಲು ಎಲ್ಲಿದ್ದವೋ ಅಲ್ಲೇ ಮಲಗಿದವು.

ಅತ್ತಿಗೆಯವರಿಗೆ ಗಾಬರಿ. ಇದನ್ನೆಲ್ಲ ಏನೂಂತ ತಿಳಕೊಳ್ಳ ಬೇಕು, ಏನು ಮಾಡಬೇಕು, ಅನ್ನೋದೇ ಅವರಿಗೆ ತೋಚ ಲಿಲ್ಲ. ಅವರಲ್ಲೊಬ್ಬಳು ಮೇಜಿನ ಕೆಳಗೆ ಅವಿತುಕೊಂಡಳು, ಇನ್ನೊಬ್ಬಳು ಎತ್ತರವಾದ ಬಡುವಿನ ಮೇಲೆ ಹೋಗಿ ಕುಳಿತಳು.

"ಆಗಲಿ, ನಿನ್ನ ಅಣ್ಣಂದಿರು ಬರಲಿ. ಅವರಿಗೆ ನಿನ್ನ ವಿಷಯ ಎಲ್ಲ ಹೇಳ್ತೀವಿ!" ಅಂತ ಕೂಗ್ತಾರೆ.

ಆದರೆ ಯೆಮೆಲ್ಯ ಸುಮ್ಮನೆ ನಕ್ಕ.

"ಅಯ್ಯೋ, ಪುಕ್ಕಲು ಹೆಂಗಸರೇ. ಬೇಗನೆ ಹೊರಗೆ ಬನ್ನಿ, ನನಗೆ ಬಿಸಿಬಿಸಿಯಾಗಿ ಕೋಸಿನ ಸಾರು ಕುಡಿಯ ಬೇಕು ಅನ್ನಿಸಿದೆ. ಬೇಗ ಮಾಡಿಕೊಡಿ. ಕಾಡಿನಲ್ಲಿ ಎಷ್ಟು ಚಳಿ ಇತ್ತು. ನನ್ನ ಮೈಯೆಲ್ಲ ಥಂಡಿಯಿಂದ ಜಡ್ಡು ಕಟ್ಟಿದೆ."

ಯೆಮೆಲ್ಯ ಕೋಸಿನ ಸಾರು ಕುಡೀತಾ, ಒಲೆ ಪಕ್ಕದ ಅಟ್ಟದ ಮೇಲೆ ಮೈ ಬೆಚ್ಚಗೆ ಮಾಡಿಕೊಂಡು ಕುಳಿತಿದ್ದಾಗ, ಹಳ್ಳಿಗರು ತ್ಸಾರ್ ಬಳಿಗೆ ಓಡಿ ಹೋಗಿ ದೂರು ಕೊಟ್ಟರು: "ನಮ್ಮ ಹಳ್ಳಿಯಲ್ಲಿ ದಡ್ಡ ಯೆಮೆಲ್ಯ ಅಂತ ಒಬ್ಬ ಇದಾನೆ. ಅವನು ಕುದುರೆಯೇ ಇಲ್ಲದೆ ಜಾರುಬಂಡಿ ಮೇಲೆ ಸವಾರಿ ಹೋಗ್ತಾನೆ, ಎಲ್ಲರನ್ನೂ ಹೆದರಿಸ್ತಾನೆ, ತಳ್ಳಿ ಬೀಳಿಸ್ತಾನೆ, ಮಂಜಿನಲ್ಲಿ ಮುಳುಗಿಸ್ತಾನೆ."

ತ್ಸಾರನಿಗೆ ಆ ವಿಚಿತ್ರ ವ್ಯಕ್ತಿಯನ್ನು ನೋಡಬೇಕೂಂತ ತುಂಬ ಆಸೆಯಾಯಿತು – ಯಾರವನು ಆ ಯೆಮೆಲ್ಯ ಅನ್ನೋನು. ಅವನನ್ನು ನನ್ನ ಬಳಿಗೆ ಕರಕೊಂಡು ಬನ್ನಿ ಅಂತ ತ್ಸಾರ್ ತನ್ನ ಅಧಿಕಾರಿಯೊಬ್ಬ ನನ್ನು ಕಳುಹಿಸಿದ.

ತ್ಸಾರನ ಅಧಿಕಾರಿ ಹಳ್ಳಿಗೆ ಬಂದ. ಒಬ್ಬನೇ ಅಲ್ಲ, ತನ್ನ ಭಟರನ್ನೆಲ್ಲ ಕಟ್ಟಿಕೊಂಡು ಬಂದ. ಯೆಮೆಲ್ಯನ ಮನೆಯನ್ನು ಕಂಡುಹಿಡಿದ. ಒಳಗೆ ಹೋದವನೇ ಬಯ್ಯುವುದಕ್ಕೆ, ಬೆದರಿಸುವುದಕ್ಕೆ ಶುರು ಮಾಡಿದ:

"ಎಲ್ಲಿದಾನೆ ಅವನು ಆ ದಡ್ಡ ಯೆಮೆಲ್ಯ? ಅವನನ್ನು ಇಲ್ಲಿಗೆ ಎಳಕೊಂಡು ಬನ್ನಿ, ಬೇಗ!"

ಅತ್ತಿಗೆಯರು ಎಷ್ಟು ಹೆದರಿದರೆಂದರೆ, ಒಲೆ ಪಕ್ಕದ ಅಟ್ಟದ ಹಿಂದೆ ಅಡಗಿಕೊಂಡು ಬಿಟ್ಟರು. ಭಯದಿಂದ ಅವರಿಗೆ ಮಾತೇ ಹೊರಡಲಿಲ್ಲ. ಯೆಮೆಲ್ಯನಾದರೋ ಸ್ವಲ್ಪವೂ ಭಯಪಡಲಿಲ್ಲ.

"ಇಲ್ಲಿದೀನಿ, ನೋಡಿ, ನಾನು" ಅವನು ಹೇಳ್ತಾನೆ. "ಈ ಒಲೆ ಪಕ್ಕದ ಅಟ್ಟದ ಮೇಲೆ ಕೂತಿದೀನೀ. ನಿಮ್ಮನ್ನು ಮೇಲಿಂದ ನೋಡ್ತಿದೀನಿ. ಏನು ಬೇಕು ನಿಮಗೆ?"



"ಬೇಗ ಬಟ್ಟೆ ಹಾಕಿಕೋ, ದಡ್ಡ ! ಬೇಗ ಬೂಟು ತೊಟ್ಟುಕೋ, ದಡ್ಡ ! ನಿನ್ನನ್ನು ತ್ಸಾರ್ ಬಳಿಗೆ ಕರ ಕೊಂಡು ಹೋಗೋಕೆ ಬಂದಿದೀನಿ, ದಡ್ಡ !"

"ನನಗೆ ಬರಲು ಇಷ್ಟವಿಲ್ಲ."

"ಓಹೋ, ಹಾಗೋ ! ಹೀಗೇಯೋ ನೀನು ನನಗೆ ಉತ್ತರ ಹೇಳೋದು ?"

ತ್ಸಾರನ ಅಧಿಕಾರಿ ಒಲೆಯ ಪಕ್ಕದ ಅಟ್ಟದ ಬಳಿಗೆ ಹೋಗಿ ಯೆಮೆಲ್ಯನ ಕೆನ್ನೆಗೆ ಚಟೀರನೆ ಹೊಡೆದ.

"ಇವನನ್ನು ಎಳೆದು ಕಟ್ಟಿಹಾಕಿ !" ಅಂತ ಕೂಗ್ತಾನೆ.

ಇದು ಯೆಮೆಲ್ಯನಿಗೆ ಇಷ್ಟವಾಗಲಿಲ್ಲ. ಅವನು ಮೆಲ್ಲಗೆ ಹೇಳಿದ:

"ಮೀನಿನ ಅಪ್ಪಣೆ, ನನ್ನ ಅಪೇಕ್ಷೆ: ನೆಲದ ಮೇಲಿರೋ ದೊಣ್ಣೆಯೇ, ನಮ್ಮ ಮನೆಗೆ ಬೇಡವಾದ ಈ ಅತಿಥಿಗೆ ನಿನ್ನ ರುಚಿ ತೋರಿಸು. ಮತ್ತೆ ಮೂಲೆಲಿರೋ ನೀನು ಕಸಬರಿಕೆಯೇ, ಅವನ ಮೈಮೇಲಿರೋ ಧೂಳು ಕಸ ಹೊಡೆದು ಅವನನ್ನು ಸ್ವಚ್ಛ ಮಾಡು !"

ದೊಣ್ಣೆ ನೆಲದ ಮೇಲಿನಿಂದ ಜಿಗಿದು ಬಂತು, ಕಸಬರಿಕೆ ಮೂಲೆಯಿಂದ ಓಡಿ ಬಂತು. ಎರಡೂ ತಮ್ಮ ಕೆಲಸ ಶುರು ಮಾಡಿದವು. ದೊಣ್ಣೆ ಆ ಅಧಿಕಾರಿಯನ್ನು ಸದೆಬಡಿಯತೊಡಗಿತು, ಕಸಬರಿಕೆ ಅವನಿಂದ ಕಸ ಹೊಡೆಯತೊಡಗಿತು. ಅಧಿಕಾರಿಯ ಬಯ್ಗುಳವೆಲ್ಲ ನಿಂತಿತು. ಈಗ ಏನಿದ್ದರೂ ನರಳುವುದಷ್ಟೆ. ವಿಲವಿಲನೆ ಒದ್ದಾಡ್ತಾನೆ, ತಲೆ ಬಾಗಿಸಿ ನಿಂತು ಕ್ಷಮೆ ಬೇಡ್ತಾನೆ.




ಕೊನೆಯಲ್ಲಿ ಅಧಿಕಾರಿಯೂ ಅವನ ಭಟರೂ ಮನೆಯಿಂದ ಹೊರಗೆ ಓಡಿದರು, ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಓಡಿದರು. ದೊಣ್ಣೆಯೂ ಕಸಬರಿಕೆಯೂ ಅಟ್ಟಿಸಿಕೊಂಡೇ ಹೋದವು, ತ್ಸಾರನ ಅರ ಮನೆಯವರೆಗೂ ದಾರಿಯುದ್ದಕ್ಕೂ ಅವನನ್ನು ಬಡಿಯುತ್ತಲೇ ಇದ್ದವು.

ಏದುಸಿರು ಬಿಡುತ್ತ ಕುಂಟುತ್ತ ಆ ಅಧಿಕಾರಿ ತ್ಸಾರನ ಬಳಿಗೆ ಹೋಗಿ ಹೇಳ್ತಾನೆ:

"ಅವನನ್ನು ಬಲವಂತದಿಂದ ತರುವುದು ಸಾಧ್ಯವಿಲ್ಲ. ಉಪಾಯದಿಂದಷ್ಟೆ ತರಬೇಕು..."

ತ್ಸಾರ್ ತನ್ನ ಇನ್ನೊಬ್ಬ ಅಧಿಕಾರಿಯನ್ನು ಯೆಮೆಲ್ಯನ ಬಳಿಗೆ ಕಳಿಸಿಕೊಟ್ಟ. ಇವನು ದರ್ಜೆಯಲ್ಲಿ ಕೆಳಗಿನವ, ಆದರೆ ಬುದ್ಧಿಯಲ್ಲಿ ಮೇಲಿನವ. ಇವನು ಜೇಬು ತುಂಬ ಮಿಠಾಯಿ, ಇನ್ನೂ ಏನೇನೋ ಸೀತಿಂಡಿಗಳನ್ನು ತುಂಬಿ ಕೊಂಡು ಯೆಮೆಲ್ಯನನ್ನು ಕರಕೊಂಡು ಬರೋಕೆ ಹೊರಟ.

ಹಳ್ಳಿಗೆ ಬಂದವನೇ ಯೆಮೆಲ್ಯನ ಅತ್ತಿಗೆ



ಯರಿಗೆ ಹೇಳಿ ಕಳುಹಿಸಿದ. ಅವರನ್ನು ಕೇಳ್ತಾನೆ:

"ನಿಮ್ಮ ಯೆಮೆಲ್ಯನಿಗೆ ಏನು ಇಷ್ಟ, ಏನು ಇಷ್ಟವಿಲ್ಲ?"

ಅವರು ಹೇಳ್ತಾರೆ:

"ದರ್ಪದಿಂದ ಮಾತಾಡೋರನ್ನು ಅವನು ಇಷ್ಟಪಡೋಲ್ಲ ಪ್ರೀತಿಯಿಂದ ಮಾತಾಡೋರನ್ನು ಇಷ್ಟ ಪಡ್ತಾನೆ."

ತ್ಸಾರನ ಅಧಿಕಾರಿ ಯೆಮೆಲ್ಯನ ಮನೆಗೆ ಹೋದ, ಒಲೆ ಪಕ್ಕದ ಅಟ್ಟದ ಬಳಿಗೆ ಹೋಗಿ ಯೆಮೆಲ್ಯನ ಮುಂದೆ ಬಾಗಿ ನಿಂತು ಹೊಳ್ತಾನೆ:

"ನಮಸ್ಕಾರ, ಯೆಮೆಲ್ಯಾನ್ ಇವಾನೊವಿಚ್! ನಾನು ಒಂದಷ್ಟು ಕೇಕು, ಕಡಲೆ ಬಿತ್ತ, ಇನ್ನೂ ಏನೇನೋ ಸೀತಿಂಡಿ ತಂದಿದೀನಿ. ಸ್ವಲ್ಪ ರುಚಿ ನೋಡ್ತೀರಾ? ನನ್ನ ಜೊತೆ ತ್ಸಾರನನ್ನು ನೋಡೋಕೆ ಬರ್ತೀರಾ? ನಿಮ್ಮನ್ನು ನೋಡಬೇಕೂಂತ ಅವರು ತುಂಬ ಇಷ್ಟಪಟ್ಟಿದಾರೆ!"

"ಆದರೆ ನನಗೆ ಈ ಬೆಚ್ಚಗಿನ ಅಟ್ಟ ಬಿಟ್ಟು ಬರೋಕೆ ಇಷ್ಟವಿಲ್ಲ" ಯೆಮೆಲ್ಯ ಹೇಳ್ತಾನೆ.

"ಬನ್ನಿ, ಯೆಮೆಲ್ಯಾನ್ ಇವಾನೊವಿಚ್‌ರವರೇ! ನೀವು ಬರದಿದ್ದರೆ ತ್ಸಾರ್ ನನ್ನನ್ನು ಜೀವಸಹಿತ ಬಿಡೋಲ್ಲ. ನಿಮ್ಮಿಂದಾಗಿ ನನ್ನ ತಲೆ ಹೋಗುತ್ತೆ!"

ತ್ಸಾರನ ಆ ಬಡಪಾಯಿ ಅಧಿಕಾರಿಯ ಬಗೆಗೆ ಯೆಮೆಲ್ಯನಲ್ಲಿ ಕನಿಕರ ಹುಟ್ಟಿತು.

"ಸರಿ, ನೀನು ಹೇಳಿದ ಹಾಗೇ ಆಗಲಿ," ಅವನು ಹೇಳ್ತಾನೆ. "ಆದರೆ ಮೊದಲು ನೀನು ಹೋಗಿ ಬೀದಿಯ ನ್ನೆಲ್ಲ ಶುದ್ಧಗೊಳಿಸು. ನಾನು ನಿನ್ನ ಹಿಂದೆಯೇ ಬರ್ತೀನಿ."

ತ್ಸಾರನ ಅಧಿಕಾರಿ ಮೆಲ್ಲಗೆ ಅತ್ತಿಗೆಯವರನ್ನು ಕೇಳ್ತಾನೆ:

"ಈ ದಡ್ಡ ಯೆಮೆಲ್ಯ ನನ್ನನ್ನೇನೂ ಮೋಸ ಮಾಡೊಲ್ಲ ತಾನೆ?"









"ಇಲ್ಲ, ಮೋಸಮಾಡೊಲ್ಲ" ಉತ್ತರ ಹೇಳ್ತಾರೆ ಅತ್ತಿಗೆಯರು. "ಅವನು ಆ ತರಹ ಅಲ್ಲ. ಮಾತು ಕೊಟ್ಟ ಮೇಲೆ ಅದರಂತೆ ನಡೀತಾನೆ !"

ತ್ಸಾರನ ಅಧಿಕಾರಿ ಹೊರಟು ಹೋದ. ಒಲೆ ಪಕ್ಕದ ಅಟ್ಟದ ಮೇಲೆ ಕುಳಿತ ಯೆಮೆಲ್ಯ ಮೈಮುರಿಯುತ್ತ ಆಕಳಿಸುತ್ತ ಹೇಳ್ತಾನೆ:

"ಈ ಅಟ್ಟ ಬೆಚ್ಚಗೆ ಎಷ್ಟು ಚೆನ್ನಾಗಿದೆ. ಇದನ್ನು ಬಿಟ್ಟುಹೋಗೋಕೆ ನನಗೆ ಮನಸಿಲ್ಲ ! ಹೊರಗಡೆ ಚಳಿ. ಮಂಜು ಸುರೀತಾ ಇದೆ. ನನ್ನ ಕೋಟೋ ಹಳೇದು, ಹರಿದು ಹೋಗಿದೆ – ತೇಪೆ ಮೇಲೆ ತೇಪೆ.... ಸರಿ, ಅಟ್ಟವೇ, ಮೀನಿನ ಅಪ್ಪಣೆ, ನನ್ನ ಅಪೇಕ್ಷೆ – ನನ್ನನ್ನು ತ್ಸಾರನ ಬಳಿಗೆ ಕರಕೊಂಡು ಹೋಗು !"


ಅಟ್ಟ ಗುಟುರು ಹಾಕಿತು, ಕದಲಿತು, ಮನೆಯಿಂದ ತನ್ನನ್ನು ಕಿತ್ತುಕೊಂಡು ಹೊರಟಿತು – ಹೊಲ ಗದ್ದೆ ದಾಟಿಕೊಂಡು, ಹಳ್ಳಿ ಪಾಳಯಗಳ ಮೂಲಕ. ದಾರಿಯಲ್ಲಿ ತ್ಸಾರನ ಅಧಿಕಾರಿ ಇನ್ನೂ ಹೋಗ್ತಾನೇ ಇದ್ದ. ಅವನನ್ನೂ ಹಿಂದೆ ಹಾಕಿ ಇದು ಮುಂದೆ ಹೋಯಿತು. ಅಟ್ಟ ನೇರವಾಗಿ ಹೋಗುತ್ತೆ. ಆ ಕಡೆ ಈ ಕಡೆ ಎಲ್ಲೂ ತಿರುಗೊಲ್ಲ. ಅದರ ಕೊಳವಿಯಿಂದ ಹೊಗೆ ಬರ್ತಿರುತ್ತೆ. ಆ ಕೊಳವಿ ಹಿಂದೆ ಯೆಮೆಲ್ಯ ಕೂತಿದಾನೆ, ಹಾಡ್ತಿದಾನೆ. ಬೆಂಕಿಗೂಡು ನೇರವಾಗಿ ರಾಜಧಾನಿಗೇ ಹೋಯಿತು, ನೇರವಾಗಿ ತ್ಸಾರನ ಅರಮನೆಗೇ ಹೋಯಿತು. ರಾಜಧಾನಿಯಲ್ಲೆಲ್ಲಾ ಕೋಲಾಹಲ: ಜನ ಆ ಕಡೆಯೇ ತೋರಿಸುತ್ತ ಕೂಗುತ್ತಿದ್ದಾರೆ, ನಾಯಿ ಬೊಗುಳ್ತಿದೆ, ಕುದುರೆ ಕೆನೀತಿದೆ, ಕೋಳಿ ಕೂಗ್ತಿದೆ...

ಸೇವಕರು ತ್ಸಾರನ ಬಳಿಗೆ ಓಡಿದರು:

"ಬೇಗ ಬನ್ನಿ, ತ್ಸಾರ್ ಪ್ರಭುವೇ ! ದಡ್ಡ ಯೆಮೆಲ್ಯ ಒಲೆ ಪಕ್ಕದ ಅಟ್ಟದ ಮೇಲೆ ಕೂತು ಬಂದಿದಾನೆ !"

ತ್ಸಾರನು ಅರಮನೆಯ ಮೊಗಸಾಲೆಗೆ ಬಂದ. ಅವನ ಜೊತೆ ಅವನ ಮಗಳು, ರಾಜಕುಮಾರರು, ಅಧಿಕಾರಿಗಳು ಎಲ್ಲ ಇದ್ದರು. ಅವನು ಯೆಮೆಲ್ಯನನ್ನು ದರ್ಪದಿಂದ ಕೇಳಿದ:

"ನೀನು ಯಾವ ಅಧಿಕಾರದ ಮೇಲೆ ಕುದುರೆ ಇಲ್ಲದೆ ಜಾರುಬಂಡಿ ಹೊಡೆದುಕೊಂಡು ಹೋದೆ? ಯಾವ ಅಧಿಕಾರದ ಮೇಲೆ ನನ್ನ ಪ್ರಜೆಗಳನ್ನೆಲ್ಲ ಹೆದರಿಸಿದೆ, ಅವರನ್ನು ಬೀಳಿಸಿ ಮಂಜಿನಲ್ಲಿ ಮುಳುಗಿಸಿದೆ?"



ಯೆಮೆಲ್ಯ ಅವನಿಗೆ ಉತ್ತರಿಸುತ್ತಾನೆ:

"ನನ್ನದೇನು ತಪ್ಪು? ಅವರೇ ದಾರಿ ಬಿಟ್ಟುಕೊಡಲಿಲ್ಲ. ಅವರೇ ಜಾರುಬಂಡಿ ಮುಂದೆ ಬಂದು ನಿಂತದ್ದು. ನೀನೂ ನಿಂತಿದ್ರೆ, ನೀನೂ ಬಿದ್ದು ಹೋಗ್ತಿದ್ದೆ!"

ತ್ಸಾರನಿಗೆ ತುಂಬ ಕೋಪ ಬಂತು. ಯೆಮೆಲ್ಯನನ್ನು ಬೆಂಕಿಗೂಡಿನ ಮೇಲಿನಿಂದ ಎಳೆದು ಹಾಕಿ ಛಡಿ ಏಟು ಕೊಡುವಂತೆ, ಜೈಲಿಗೆ ದಬ್ಬುವಂತೆ ಆಜ್ಞೆ ಕೊಟ್ಟ. ಯೆಮೆಲ್ಯ ನೋಡ್ತಾನೆ – ಇಲ್ಲಿರೋದು ಒಳ್ಳೆಯದಲ್ಲ ಅನಿಸುತ್ತೆ ಅವನಿಗೆ. ಮೆಲ್ಲಗೆ ಹೇಳ್ತಾನೆ:

"ಮೀನಿನ ಅಪ್ಪಣೆ, ನನ್ನ ಅಪೇಕ್ಷೆ – ಅಟ್ಟವೇ, ನಡೀ ಹಿಂದಕ್ಕೆ ಹೋಗೋಣ. ಮತ್ತೆ ನೀನು, ರಾಜಕುಮಾರಿಯೇ, ನನ್ನನ್ನು ಗಾಢವಾಗಿ ಪ್ರೀತಿಸುವಂತಾಗು, ನನ್ನನ್ನು ಮದುವೆಯಾಗಬೇಕು ಅಂತ ಪಟ್ಟು ಹಿಡಿಯುವಂತಾಗು!"

ಅಟ್ಟ ಹಿಂದಕ್ಕೆ ತಿರುಗಿ ಮನೆಯ ಕಡೆಗೆ ಹೊರಟಿತು. ತ್ಸಾರ್ ಮತ್ತೆ ಕೂಗಿ ಹೇಳಿದ: "ಹಿಡಿಯಿರಿ ಅವನ್ನ! ಎಳೆದುಹಾಕಿ, ಕಟ್ಟಿಹಾಕಿ!" ಆದರೆ ಅದೆಲ್ಲ ಎಲ್ಲಿ ಆಗುತ್ತೆ: ಯೆಮೆಲ್ಯ ಅರಮನೆಗೆ ಬಂದ್ಯಾ ಅಂತ ಕರೆಸಿಕೊಳ್ಳದೆ ಬಂದ, ಹೋಗ್ತೀಯಾ ಅಂತ ಹೇಳಿಸಿಕೊಳ್ಳದೆ ಹೊರಟು ಹೋದ.

ಅಟ್ಟ ಮನೆಗೆ ಬಂತು, ಒಂದು ಗುಟುರು ಹಾಕಿ ತನ್ನ ಮೂಲೆ ಸೇರಿಕೊಂಡಿತು. ಯಾವತ್ತೂ ನಿಂತಂತೆಯೇ ನಿಂತಿತು, ಹೊರಗೆ ಎಲ್ಲೂ ಹೋಗಿಯೇ ಇರಲಿಲ್ಲವೇನೋ ಅನ್ನುವಂತೆ.

ತ್ಸಾರನ ಅರಮನೆಯಲ್ಲಿ ಅಳುವೋ ಅಳು, ಗೋಳೋಗೋಳು. ರಾಜಕುಮಾರಿ ಪಟ್ಟುಹಿಡಿದು ಕೂತಿದಾಳೆ. ತ್ಸಾರನಿಗೆ ಸ್ವಲ್ಪವೂ ಶಾಂತಿ ಕೊಡುತ್ತಿಲ್ಲ:

"ಯೆಮೆಲ್ಯನನ್ನು ಯಾಕೆ ಬೆದರಿಸಿದೆ? ಯೆಮೆಲ್ಯನನ್ನು ಯಾಕೆ ಹೆದರಿಸಿದೆ? ಅವನಿಲ್ಲದೆ ನಾನು ಪ್ರಾಣದಿಂದಿರಲು ಸಾಧ್ಯವಿಲ್ಲ. ಅವನನ್ನು ನಾನು ಮದುವೆಯಾಗಬೇಕು!"

ತ್ಸಾರ್ ರೇಗಿದ, ಕೂಗಾಡಿದ, ಬಯ್ದ. ನೆಲವನ್ನು ಕಾಲಿನಿಂದ ಕುಟ್ಟಿದ. ಮೇಜು ಗುದ್ದಿದ.



ಏನು ಮಾಡಿದರೂ ರಾಜ ಕುಮಾರಿಯನ್ನು ಸಮಾಧಾನ ಮಾಡಲು ಆಗಲಿಲ್ಲ. ಅವಳು ಹಗಲೂ ರಾತ್ರಿ ಅಳ್ತಾಳೆ, ಕಣ್ಣೇ ಮುಚ್ಚೊಲ್ಲ, ತಿನ್ನಲ್ಲ, ಕುಡಿಯಲ್ಲ, ಮಲಗಲ್ಲ. ತೀರ ಬಡವಾದಳು. ಏನೂ ಮಾಡುವ ಹಾಗಿರಲಿಲ್ಲ. ಯೆಮೆಲ್ಯ ನನ್ನು ಕರಕೊಂಡು ಬನ್ನಿ ಅಂತ ತ್ಸಾರ್ ಮತ್ತೆ ಆಜ್ಞಾಪಿಸಿದ.

"ಆದರೆ ಆ ಅಟ್ಟದ ಮೇಲೆ ಕೂತು ಬರುವುದು ಮಾತ್ರ ಬೇಡ" ಅವನು ಹೇಳ್ತಾನೆ. "ಅಟ್ಟದ ಮೇಲೆ ಕೂತು ಬಂದರೆ ಅವನನ್ನು ಹಿಡಿಯೋಕೆ ಆಗೊಲ್ಲ. ಜಾರುಬಂಡಿಯಲ್ಲಿ ಕರಕೊಂಡು ಬನ್ನಿ. ಆಗ ಅವನು ನಮ್ಮ ಕೈಯೊಳಗೆ ಬೀಳ್ತಾನೆ."

ತ್ಸಾರನ ಕುತಂತ್ರದ ಅಧಿಕಾರಿ ಹಳ್ಳಿಗೆ ಮತ್ತೆ ಓಡಿದ. ಯೆಮೆಲ್ಯನನ್ನು ಹೊಗಳಿ ಮಾತನಾಡಿಸುತ್ತ ಮೋಸ ಮಾಡಿದ, ಅವನು ಕುಡಿಯೋ ಪಾನೀಯಕ್ಕೆ ಮತ್ತು ಬರಿಸುವ ಮದ್ದು ಸೇರಿಸಿದ. ಯೆಮೆಲ್ಯ ಮೈಮರೆತು ಮಲಗಿದಾಗ ತ್ಸಾರನ ಅಧಿ ಕಾರಿ ಅವನ ಕೈಕಾಲು ಕಟ್ಟಿ ಜಾರುಬಂಡಿ ಯಲ್ಲಿ ಹಾಕಿಕೊಂಡು ಸಾಧ್ಯವಾದಷ್ಟು ಬೇಗ ಅರಮನೆಗೆ ಕರಕೊಂಡು ಬಂದ.

ಹೀಗೆ ಯೆಮೆಲ್ಯನನ್ನು ತ್ಸಾರನ ಬಳಿಗೆ ಕರೆತರಲಾಯಿತು. ಅಲ್ಲಾಗಲೇ ಒಂದು ದೊಡ್ಡ ಪೀಪಾಯಿಯನ್ನು ಸಿದ್ಧ ಗೊಳಿಸಿ ಇರಿಸಲಾಗಿತ್ತು. ತ್ಸಾರನ ಸೇವ ಕರು ಯೆಮೆಲ್ಯನನ್ನು ಜಾರುಬಂಡಿಯಿಂದ ಹೊರಗೆಳೆದು ತಂದು ಪೀಪಾಯಿಯೊಳಕ್ಕೆ ದೂಕಿದರು. ಆದರೆ ರಾಜಕುಮಾರಿ ಇದನ್ನು ನೋಡಿಬಿಟ್ಟಳು. ಅಲ್ಲಿಗೆ ಓಡಿ ದಳು. ಪೀಪಾಯಿ ಸುತ್ತ ತೋಳು ಬಳಸಿ ನಿಂತಳು. ಬಿಡಲೇ ಇಲ್ಲ.

"ಯೆಮೆಲ್ಯನನ್ನು ಎಲ್ಲಿಗೆ ಕಳಿ ಸ್ತೀರೋ ನನ್ನೂ ಅಲ್ಲಿಗೇ ಕಳ್ಸಿ!" ಅವಳು ಗಟ್ಟಿಯಾಗಿ ಅಳುತ್ತಾ ಹೇಳ್ತಾಳೆ.





ತ್ಸಾರನಿಗೆ ಎಷ್ಟು ಕೋಪ ಬಂತು ಅಂದ್ರೆ ತನ್ನ ವಿವೇಕವನ್ನೆಲ್ಲ ಕಳೆದುಕೊಂಡ – ರಾಜಕುಮಾರಿಯನ್ನೂ ಪೀಪಾಯಿಯೊಳಗೆ ಹಾಕಿ ಅಂತ ಆಜ್ಞಾಪಿಸಿದ.

"ಅವಳಿಗೆ ಅವನ ಮೇಲೆ ಅಷ್ಟು ಪ್ರೀತಿ ಇದ್ದರೆ, ಅವನ ಜೊತೆಗೇ ನರಕಕ್ಕೆ ಹೋಗಲಿ!"

ತ್ಸಾರನು ಹೇಳಿದಂತೆ ಹಾಗೇ ಮಾಡಲಾಯಿತು. ಪೀಪಾಯಿಯ ಸುತ್ತ ಬಲವಾದ ಕಬ್ಬಿಣದ ಬಳೆಗಳನ್ನು ಬಿಗಿಯಲಾಯಿತು. ಕಲ್ಲೆಣ್ಣೆ ಬಳಿಯಲಾಯಿತು. ಆಮೇಲೆ ಅದನ್ನು ಸಮುದ್ರಕ್ಕೆ ಎಸೆಯಲಾಯಿತು. ಅಲೆಗಳು ಅದನ್ನು ದೂರ ಕೊಂಡೊಯ್ದುವು....

ಪೀಪಾಯಿಯೊಳಗೆ ರಾಜಕುಮಾರಿ ಯೆಮೆಲ್ಯನ ಕಟ್ಟುಗಳನ್ನೆಲ್ಲ ಬಿಚ್ಚಿದಳು. ಅವನನ್ನು ಎಬ್ಬಿಸಿದಳು:

"ಇನ್ನೂ ಏನು ನಿದ್ದೆ! ಏಳು! ನಾವು ಪೀಪಾಯಿಯೊಳಗೆ ಇದೀವಿ ನೋಡು. ಸಮುದ್ರದಲ್ಲಿ ತೇಲಿಕೊಂಡು ಹೋಗ್ತಿದೀವಿ. ತಿನ್ನೋಕೆ ಏನೂ ಇಲ್ಲ, ಕುಡಿಯೋಕೆ ಏನೂ ಇಲ್ಲ. ಹಸಿವಿನಿಂದ ಸಾಯ್ತೀವಷ್ಟೆ!"

ಯೆಮೆಲ್ಯ ಹೇಳ್ತಾನೆ:

"ನಾನು ನಿದ್ದೆ ಮಾಡಬೇಕು."

"ನಂಗೂ ನಿದ್ದೆ ಬರ್‍ತಾ ಇದೆ. ಆದರೆ ನಿದ್ದೆ ಮಾಡೋಕೆ ಇದು ಸಮಯವೇ? ಪೀಪಾಯಿಯನ್ನು ತೀರಕ್ಕೆ ತೇಲಿಕೊಂಡು ಹೋಗುವಂತೆ ಮಾಡು. ನೀನು ತುಂಬ ಬುದ್ಧಿವಂತ. ನಿನ್ನ ಕೈಲಿ ಆಗದೇ ಇರೋದು ಏನಿದೆ!"



"ಸರಿ, ನೀನು ಹೇಳಿದ ಹಾಗೇ ಆಗಲಿ" ಯೆಮೆಲ್ಯ ಹೇಳ್ತಾನೆ. "ಮೀನಿನ ಅಪ್ಪಣೆ, ನನ್ನ ಅಪೇಕ್ಷೆ – ಪೀಪಾಯಿಯೇ, ಸಮುದ್ರದಿಂದ ಹೊರಕ್ಕೆ, ಹಸುರು ಹುಲ್ಲು, ಬಂಗಾರದ ಮರಳು ಇರೋ ತೀರಕ್ಕೆ ನಮ್ಮನ್ನು ಕರಕೊಂಡು ಹೋಗಿ, ಅಲ್ಲಿ ಒಡೆದುಕೋ."

ಅವನು ಹೇಳಿದನೋ ಇಲ್ಲವೋ ಪೀಪಾಯಿಯು ಆಗಲೇ ಒಂದು ದ್ವೀಪಕ್ಕೆ ಹೋಗಿತ್ತು, ಅಲ್ಲಿ ಒಡೆದುಕೊಂಡಿತು. ಅವರು ಹಸುರು ಹುಲ್ಲು, ಬಂಗಾರದ ಮರಳು ಇರುವ ಜಾಗಕ್ಕೆ ಬಂದರು.



ರಾಜಕುಮಾರಿ ಸುತ್ತ ನೋಡಿ ಹೇಳ್ತಾಳೆ:

"ಯೆಮೆಲ್ಯುಷ್ಕಾ, ನಾವಿಲ್ಲಿ ವಾಸಿಸೋದು ಹೇಗೆ? ಇಲ್ಲಿ ಒಂದು ಹಳ್ಳಿಯೂ ಇಲ್ಲ, ಒಂದು ಪಟ್ಟಣವೂ ಇಲ್ಲ. ನಮಗೊಂದು ಪುಟ್ಟ ಮನೆಯಾದರೂ ಬೇಡವೇ..."


"ಆಗಲಿ, ಮನೆ ಬರುತ್ತೆ. ಆದರೆ ಅದು ಪುಟ್ಟದೇನೂ ಆಗಿರೊಲ್ಲ" ಅಂತಾನೆ ಯೆಮೆಲ್ಯ. "ಮೀನಿನ ಅಪ್ಪಣೆ, ನನ್ನ ಅಪೇಕ್ಷೆ – ಇಲ್ಲೊಂದು ಅರಮನೆ ಆಗಲಿ. ತ್ಸಾರನ ಅರಮನೆಗಿಂತ ಚೆನ್ನಾಗಿರಲಿ!"

ಅವನು ಹೇಳಿದ ಅಷ್ಟೆ – ಆಗಲೇ ಅರಮನೆ ಸಿದ್ಧವಾಗಿತ್ತು, ನೆಲದಿಂದ ಹುಟ್ಟಿ ಬಂದಂತೆ. ಅದು ಏಳು ಕಂಬಗಳ ಮೇಲೆ ನಿಂತಿದೆ. ಅದ್ಭುತವಾಗಿ ಸುಂದರವಾಗಿದೆ. ಮೇಲ್ಛಾವಣಿ ಬೆಳ್ಳಿಯದು. ಗುಮ್ಮಟಗಳು



ಬಂಗಾರದ್ದು. ಒಂದೊಂದು ಪಕ್ಕದಲ್ಲೂ ಒಳಕ್ಕೆ ಹೋಗೋಕೆ, ಹೊರಕ್ಕೆ ಬರೋಕೆ ಪುಟ್ಟ ಮೊಗಸಾಲೆಗಳು. ಅರಮನೆ ಸುತ್ತ ಹೂದೋಟ, ಕೊಳ, ಬೇಸಿಗೆ ಕುಟೀರಗಳು. ತೋಟದಲ್ಲಿ ಕೋಗಿಲೆಗಳು ಹಾಡ್ತಿವೆ. ಕೊಳದಲ್ಲಿ ಹಂಸಗಳು ತೇಲ್ತಿವೆ. ಅವರು ಅರಮನೆ ಒಳಗೆ ಹೋದರು. ಅಲ್ಲಿ ಅವರಿಗೆ ಇನ್ನೂ ಹೆಚ್ಚು ಆಶ್ಚರ್ಯಕಾದಿತ್ತು. ಅರಮನೆಯ ಒಳವಾಳಿಗೆಗಳಿಂದ ಸೂರ್ಯನ ಕಾಂತಿ ಬೆಳಗುತ್ತಿದೆ; ಸೂರ್ಯನ ಕಾಂತಿ ಹೋದ ಮೇಲೆ – ಚಂದ್ರನ ಬೆಳಕು ಬರುತ್ತೆ, ಜೊತೆಗೇ ಕಂಗೊಳಿಸುವ ನಕ್ಷತ್ರಗಳು....


ಅವರು ಆ ಅರಮನೆಯಲ್ಲಿ ವಾಸಿಸತೊಡಗಿದರು. ಅಲ್ಲಿ ಅವರಿಗೆ ಬೇಕಾದುದೆಲ್ಲ ಇತ್ತು. ಆದರೆ ಒಂಟಿಯಾಗಿದ್ದರು – ಇನ್ನೊಬ್ಬ ಉಸಿರಾಡುವ ವ್ಯಕ್ತಿಯೂ ಅಲ್ಲಿರಲಿಲ್ಲ.



“ನಮ್ಮ ಮನೆಯವರನ್ನೂ ನಾವು ಕಾಣುವಂತಾದರೆ!” ಹೇಳ್ತಾಳೆ ರಾಜಕುಮಾರಿ.

“ಆಗಲಿ, ಅದಕ್ಕೇನಂತೆ” ಅಂತಾನೆ ಯೆಮೆಲ್ಯ. “ಮೀನಿನ ಅಪ್ಪಣೆ, ನನ್ನ ಅಪೇಕ್ಷೆ – ಈ ದ್ವೀಪಕ್ಕೂ ಸಮುದ್ರ ತೀರಕ್ಕೂ ಮಧ್ಯೆ ಒಂದು ಉಕ್ಕಿನ ಸೇತುವೆ ಆಗಲಿ! ಸೇತುವೆ ಮೇಲೆ ನನ್ನ ಅಣ್ಣಂದಿರೂ ಅತ್ತಿಗೆಯರೂ ನಮ್ಮನ್ನು ಕಾಣೋದಕ್ಕೆ ಬರಲಿ!”

ಅವನ ಬಾಯಿಂದ ಈ ಮಾತು ಇನ್ನೂ ಬಂದೇ ಇರಲಿಲ್ಲ, ಆಗಲೇ ಸಮುದ್ರ ತೀರಕ್ಕೂ ದ್ವೀಪಕ್ಕೂ ಮಧ್ಯೆ ಒಂದು ದೊಡ್ಡ ಸೇತುವೆ ಕಂಡುಬರುತ್ತೆ. ಅದರ ಹಿಡಿಪಟ್ಟಿಗಳು ಚಿನ್ನದವಾಗಿವೆ. ಅವುಗಳಿಗೆ ಬೆಂಬಲವಾಗಿ ಮುತ್ತು ರತ್ನತುಂಬಿದ ಕಂಬಿಗಳು. ಅವುಗಳು ನಕ್ಷತ್ರಗಳಂತೆ ಥಳಥಳಿಸುತ್ತಿವೆ. ಈ ಸೇತುವೆ ಮೇಲೆ ಒಂದು ಕುದುರೆ ಗಾಡಿ ಬರುತ್ತೆ. ಆ ಗಾಡಿಯಲ್ಲಿ ಯೆಮೆಲ್ಯನ ಅಣ್ಣಂದಿರೂ ಅವರ ಮಡದಿಯರೂ ಕೂತಿದಾರೆ. ಎಲ್ಲರೂ



ಹೊಸ ಬಟ್ಟೆ ತೊಟ್ಟಿದ್ದಾರೆ. ಅವು ತೋಟದ ಹೂಗಳ ಹಾಗೆ ಹೊಳೀತಿವೆ! ಅವರು ಯೆಮೆಲ್ಯನನ್ನು ಹೇಗೆ
ಹೊಸ ಬಟ್ಟೆ ತೊಟ್ಟಿದ್ದಾರೆ. ಅವು ತೋಟದ ಹೂಗಳ ಹಾಗೆ ಹೊಳೀತಿವೆ! ಅವರು ಯೆಮೆಲ್ಯನನ್ನು ಹೇಗೆ
ಅಪ್ಪಿಕೊಂಡರು, ಹೇಗೆ ಮುದ್ದಾಡಿದರು!

"ಇಲ್ಲಿದೀಯಾ ನೀನು" ಅಂತ ಹೇಳ್ತಾರೆ ಅವರು. "ನಿನಗಾಗಿ ನಾವು ಎಲ್ಲ ಕಡೆಯೂ, ಕಾಡುಗಳಲ್ಲಿ, ಜೌಗುಗಳಲ್ಲಿ ಎಲ್ಲ ಕಡೆಯೂ, ಹುಡುಕಾಡಿದಿವಿ. ನೀನು ಅಲ್ಲಿ ಎಲ್ಲಿರ್‍ತೀಯಾ!"

ಇದ್ದಕ್ಕಿದ್ದಂತೆ ಕೇಳಿಬರುತ್ತೆ – ಫಿರಂಗಿ ಮೊಳಗುವ ಶಬ್ದ. ದ್ವೀಪಕ್ಕೆ ಹಡಗೊಂದು ಬಂತು. ಆ ಹಡಗಿನಲ್ಲಿ ತ್ಸಾರನೂ ಅವನ ಎಲ್ಲ ಅಧಿಕಾರಿಗಳೂ ನಿಂತಿದ್ದರು. ಯೆಮೆಲ್ಯ ಕೇಳ್ತಾನೆ:

"ಎಲ್ಲಿಗೆ ಹೊರಟಿರಿ, ಹಡಗಿನಲ್ಲಿ?"

"ತುಂಬ ದಿವಸದಿಂದ ಸಮುದ್ರದಲ್ಲಿ ಸುತ್ತಾಡ್ತಿದೀವಿ. ಒಂದು ಪೀಪಾಯಿಗಾಗಿ ಹುಡುಕಾಡ್ತಾ ಇದೀವಿ."

"ಯಾಕೆ ಪೀಪಾಯಿ ನಿಮಗೆ?"

"ಯಾಕೇಂತ ಕೇಳ್ತೀರ?" ತ್ಸಾರ್ ಹೇಳ್ತಾನೆ. "ಅದರಲ್ಲಿ ನನ್ನ ಮಗಳೂ ದಡ್ಡ ಯೆಮೆಲ್ಯನೂ ಇದ್ದರು. ನನಗೆ ಒಂದು ದಿನ ಬುದ್ಧಿ ಕೆಟ್ಟು ಹೋಯ್ತು, ಅವರನ್ನು ಸಮುದ್ರದಲ್ಲಿ ಮುಳುಗಿ ಹೋಗಲಿ ಅಂತ ಎಸೆದು ಬಿಟ್ಟೆ..."

ಯೆಮೆಲ್ಯ ಹೇಳ್ತಾನೆ:

"ಹಾಗೇನೂ! ನನ್ನನ್ನೇ ಸ್ವಲ್ಪ ಚೆನ್ನಾಗಿ ನೋಡಿ. ನಾನೇ ಅಲ್ವೇ ನಿಮ್ಮನ್ನು ಕಾಣೋಕೆ ಅಟ್ಟದ ಮೇಲೆ ಕೂತು ಬಂದದ್ದು?"

ತ್ಸಾರ್ ನೋಡಿದ – ಹೆದರಿಕೆಯಿಂದ ಸಾಯುವಂತಾದ. ಯೆಮೆಲ್ಯನ ಕಾಲುಗಳ ಮೇಲೆ ಬಿದ್ದು ಕೇಳಿಕೊಂಡ:

"ಕ್ಷಮಿಸು, ಯೆಮೆಲ್ಯುಷ್ಕಾ. ನನ್ನನ್ನು ದಂಡಿಸಬೇಡ."

"ಆಗಲಿ" ಯೆಮೆಲ್ಯ ಹೇಳ್ತಾನೆ. "ಇದೊಂದು ಸಾರಿಗೆ ನಿನ್ನನ್ನು ಕ್ಷಮಿಸಿದೇನೆ."

ಅಷ್ಟು ಹೊತ್ತಿಗೆ ರಾಜಕುಮಾರಿ ಅರಮನೆಯಿಂದ ಹೊರಗೆ ಬಂದಳು.

"ಬನ್ನೀ, ಬನ್ನೀ, ಎಲ್ಲ ಒಳಗೆ ಬನ್ನಿ!" ಅವಳು ಹೇಳ್ತಾಳೆ. "ನಮ್ಮ ಅರಮನೆಗೆ ಬನ್ನಿ!"

ಅವರೆಲ್ಲ ಒಳಗೆ ಹೋದರು. ಮೇಜಿನ ಸುತ್ತ ಕೂತುಕೊಂಡರು. ಅದರ ಮೇಲೆ ಕಸೂತಿ ಹಾಕಿದ ಬಟ್ಟೆ ಹಾಸಿತ್ತು. ಅವರೆಲ್ಲ ತುಂಬ ಸಂತೋಷದಿಂದ ತಿಂದರು, ಉಂಡರು, ಹಾಡಿದರು.

ನಾನೂ ಅಲ್ಲಿದ್ದೆ,
ಜೇನು-ಮದ್ಯ ಕುಡಿದೆ,
ಗಡ್ಡವೆಲ್ಲ ಒದ್ದೆಯಾಯ್ತು,
ಆದರೆ ಒಂದು ಹನೀನೂ ಹೊಟ್ಟೇನೆ
ಸೇರಲಿಲ್ಲ!



ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್
ಚಿತ್ರಗಳು: ತತ್ಯಾನ ಮಾವ್ರಿನ



ПО ЩУЧЬЕМУ ВЕЛЕНИЮ
Русская народная сказка
На языке каннада

EMELYA AND THE PIKE
A Fairy Tale
In Kannada



ರಾದುಗ ಪ್ರಕಾಶನ
ಮಾಸ್ಕೋ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ.
ಬೆಂಗಳೂರು

ಎರಡನೆಯ ಮುದ್ರಣ ರಾದುಗ ಪ್ರಕಾಶನ 1989
ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾದುದು

ISBN 5-05-002744-8